**ದಿನಾಂಕ:28-03-2025** ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲು: ಫಿರ್ಯಾದಿ ಪರ ವಕೀಲರಿಂದ:

ನಾನು 9ನೇ ತರಗತಿಯವರಿಗೆ ವಿಧ್ಯಾಬ್ಯಾಸ ಮಾಡಿರುತ್ತೇನೆ. ಫಿರ್ಯಾದಿಯು ನನಗೆ ಸುಮಾರು 6 ವರ್ಷಗಳಿಂದ ಪರಿಚಯ ಇರುತ್ತಾರೆ. ನಿಪಿ -1 ರ ವ್ಯವಹಾರದ ಪೂರ್ವದಲ್ಲಿ ನನ್ನ ಮತ್ತು ಫಿರ್ಯಾದಿಯ ನಡುವೆ ಬೇರೆ ಯಾವುದೇ ವ್ಯವಹಾರ ಇರಲಿಲ್ಲ. ನಾನು ಕೊಪ್ಪಳದ ಶಾರದ ಟಾಕೀಸ್ ಹಿಂಭಾಗ ವಾಸ ಮಾಡುತ್ತಿದ್ದೇನು ಎಂದರೆ ಸರಿ. ನಂತರ ವಾರಕರ್ ಓಣಿಯಲ್ಲಿ ವಾಸ ಇದ್ದೇನು ಎಂದರೆ ಸರಿ. ಈಗ 3 ತಿಂಗಳುಗಳಿಂದ ನನ್ನ ತವರು ಮನೆಯಲ್ಲಿ ವಾಸ ಇರುತ್ತೇನೆ. ಶಾರದ ಟಾಕೀಸ್ ಬಳಿ ಫಿರ್ಯಾದಿ ಮನೆ ಇರುತ್ತದೆ ಎಂದರೆ ಸರಿ. ನಿಪಿ -1 ಎ ಸಹಿ ನನ್ನ ಸಹಿಯಾಗಿರುತ್ತದೆ. ನನ್ನ ಮತ್ತು ಫಿರ್ಯಾದಿಯ ನಡುವೆ ಒಂದು ಕೈಗಡ ಸಾಲದ ಪತ್ರ ಅಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಪತ್ರಕ್ಕೆ ನಾನು ಮತ್ತು ನನ್ನ ತಾಯಿ ಹಾಗೂ ಗಂಡ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅ ಸಮಯದಲ್ಲಿ ಶಂಕ್ರಪ್ಪ, ಎ ಬಿ ಹೂಗಾರ ಸಾಕ್ಷಿದಾರರಾಗಿ ಇದ್ದರು ಎಂದರೆ ಸರಿಯಲ್ಲ. ಸದರಿ ಕೈಗಡ ಸಾಲದ ಪತ್ರದ ಸಮಯದಲ್ಲಿ ಎರಡು ಚಕ್ ಗಳನ್ನು ಫಿರ್ಯಾದಿಗೆ ನೀಡಿದ್ದೇನು ಎಂದರೆ ಸರಿಯಲ್ಲ.

2. ಸದರಿ ಎರಡು ಚಕ್ ಗಳನ್ನು ವಾಪಸ್ಸು ಪಡೆದು ಪುನಃ ಎರಡು ಚಕ್ ಗಳನ್ನು ಫಿರ್ಯಾದಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಫಿರ್ಯಾದಿಗೆ ಹಣ ನೀಡುವುದನ್ನು ತಪ್ಪಿಸಿಕೊಳ್ಳಲು ಕರಾರು ಪತ್ರದ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಫಿರ್ಯಾದಿಯ ನಡುವೆ ಸಾಲದ ಕುರಿತು ಜಗಳವಾಗಿರುತ್ತದೆ ಎಂದರೆ ಸರಿ. ನಂತರ ಪೋಲಿಸ್ ಠಾಣೆಗೆ ಹೋಗಿದ್ದೇನು ಎಂದರೆ ಸಾಕ್ಷಿಯು ಚಕ್ ದುರುಪಯೋಗ ಪಡಿಸಿಕೊಂಡಿರುವ ಕುರಿತು ಪೋಲಿಸ್ ಠಾಣೆಗೆ ಹೋಗಿದ್ದು ದೂರನ್ನು ಸ್ವೀಕರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಚಕ್ ನ್ನು ದುರುಪಯೋಗ ಪಡಿಸಿಕೊಂಡಿರುವ ಕುರಿತು ಯಾವುದೇ ರಿಪ್ಲ್ಯೆ ನೋಟಿಸ್ ನೀಡಿರುವುದಿಲ್ಲ ಎಂದರೆ ಸರಿ.

3. ನಾನು ಫಿರ್ಯಾದಿಯಿಂದ ಒಟ್ಟು 6,50,000/- ಸಾಲ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಧರ್ಮಸ್ಥಳ ಸಂಘದಲ್ಲಿ ಯಾವುದೇ ಭದ್ರತೆ ಪಡೆಯದೇ 2 ಲಕ್ಷದವರೆಗೆ ಸಾಲ ನೀಡುತ್ತಾರೆ ಎಂದರೆ ಸಾಕ್ಷಿಯು ಮುಂಚೆ ನೀಡುತ್ತಿದ್ದರು ಎಂದು ನುಡಿಯುತ್ತಾರೆ. ನಿಪಿ -1 ರ ಚಕ್ ನ್ನು ಧರ್ಮಸ್ಥಳ ಸಂಘದ ಸಾಲದ ಭದ್ರತೆಗೆ ನೀಡಿರುವ ಕುರಿತು ಯಾವುದೇ ದಾಖಲೆಗಳು ಇರುವುದಿಲ್ಲ. ಚಕ್ ನೀಡಿರುವ ಕುರಿತು ಹಿಂಬರಹ ಕೇಳಿರುತ್ತೇನೆ ಅದರೇ ಅವರು ನೀಡಿರುವುದಿಲ್ಲ. ನಿಪಿ 1 ರ

ಚೆಕ್ ನ್ನು ಫಿರ್ಯಾದಿಗೆ ನೀಡಿದ್ದರೂ ಸಹ ಧರ್ಮಸ್ಥಳ ಸಂಘಕ್ಕೆ ನೀಡಿರುವುದಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ರ ಬರವಣಿಗೆಗಳನ್ನು ನಾನೇ ಬರೆದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವಿರುದ್ದ ಸಿಸಿ ನಂ. 2901/2023 ರ ಪ್ರಕರಣ ಬಾಕಿ ಇರುತ್ತದೆ ಎಂದರೆ ಸರಿ. ನಮ್ಮ ಮನೆತನದ ಅಡಚಣೆಗೆ ಸಾಲವನ್ನು ಪಡೆದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2020 ನೇ ಸಾಲಿನಲ್ಲಿ ನಮ್ಮ ಮನೆಯನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ನಾನು ಹಲವು ಜನರ ಬಳಿ ಸಾಲವನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

**ಹೆ. ಜೆ ಎಂ ಎಫ್ ಸಿ ಕೊಪ್ಪಳ.**